**ದಿಃ 31.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಬಿ ವಕೀಲರಿಂದಃ ಪ್ರತಿವಾದಿ 1(ಎ)ದಿಂದ 1(ಎಫ್) ನೇದವರ ಪರವಾಗಿಃ**

**16).** ನಾನು ಮತ್ತು 1 ನೇ ಪ್ರತಿವಾದಿ ಮಹಮ್ಮದಯೂಸೂಫ ಇಬ್ಬರೂ ಖಾಸ ಅಣ್ಣ ತಮ್ಮಂದಿರು ಅಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಮಹಮ್ಮದಯೂಸೂಫ ದಿನಾಂಕಃ 22.11.2001 ನೇ ಇಸ್ವಿಯ ಪೂರ್ವದಲ್ಲಿ ಯಾಲಕ್ಕಿ, ಕರಿಮೆಣಸು, ಶುಂಠಿ ಇನ್ನೂ ಇತರೇ ಬೇರೆ ಬೇರೆ ವಾಣಿಜ್ಯ ಬೆಳೆಗಳ ಮಾರಾಟವನ್ನು ಕೂಡಿ ಮಾಡುತ್ತಿದ್ದೇವು ಅಂದರೆ ಸರಿ. ದಿನಾಂಕಃ 22.11.2001 ನೇ ಇಸ್ವಿಯ ನಂತರ ನಾನು ಸ್ವತಃ ನನ್ನ ವ್ಯಾಪಾರವನ್ನು ಪ್ರತ್ಯೇಕವಾಗಿ ಮಾಡಿಕೊಂಡು ಬಂದಿರುತ್ತೇನೆ ಅಂದರೆ ಸರಿ. ದಿನಾಂಕಃ 22.11.2001 ರಂದು ನನ್ನ ಅಜ್ಜನಿಗೆ ಸಂಬಂದಪಟ್ಟಂತಹ 14 ಮನೆಗಳು ಮತ್ತು ಅದಕ್ಕೆ ಸಂಬಂದಪಟ್ಟ ಬಯಲು ಜಾಗೆಯ ಕುರಿತಾಗಿ ನನ್ನ ನಡುವೆ ಮತ್ತು 1 ನೇ ಪ್ರತಿವಾದಿ ಮಹ್ಮದ ಯೂಸೂಫ ಪಾಲು ವಾಟ್ನಿ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ಸದರಿ ಪಾಲುವಾಟ್ನಿ ಪತ್ರ ಸಹ ನೊಂದಣಿ ಸಹ ಮಾಡಿಸಿರುತ್ತೇವೆ. ಸದರಿ ಪಾಲುವಾಟ್ನಿ ಪತ್ರವು ಈಗಾಗಲೇ ನಿ.ಡಿ-1 ಎಂದು ಗುರುತಿಸಲಾಗಿರುತ್ತದೆ. ದಿನಾಂಕಃ 22.11.2001 ನಾನು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇನೆ ಮತ್ತು 1 ನೇ ಪ್ರತಿವಾದಿ ಮಹ್ಮದ ಯೂಸೂಫ ಈತನು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದಾನೆ ಅಂದರೆ ಸರಿ. ನನ್ನ ಹಿಸ್ಸೇಗೆ ಬಂದಂತಹ ಮನೆಗಳನ್ನು ಮತ್ತು ಖುಲ್ಲಾ ಜಾಗೆಗಳನ್ನು ಯಾಲಕ್ಕಿ ಸಹಕಾರ ಪತ್ತಿನ ಸಂಘದ ಬ್ಯಾಂಕಿಗೆ ಅವುಗಳನ್ನು ಒತ್ತಿ ಇಟ್ಟು ಸಾಲವನ್ನು ಪಡೆದಿರುತ್ತೇನೆ ಅಂದರೆ ಸರಿ. ಸದರಿ ನನ್ನ ಪಾಲಿಗೆ ಬಂದಂತಹ ಮನೆಗಳನ್ನು ಮತ್ತು ಖುಲ್ಲಾ ಜಾಗೆಗಳನ್ನು ಯಾಲಕ್ಕಿ

ಪತ್ತಿನ ಸಹಕಾರಿ ಸಂಘಕ್ಕೆ ಅಡಮಾನ ಇಟ್ಟು ಸಾಲ ಪಡೆದುಕೊಂಡಿರುತ್ತೇನೆ. ಸದರಿ ಅಡಮಾನ ಪತ್ರವನ್ನು ಈಗಾಗಲೇ ನಿ.ಡಿ-2 ಎಂದು ಗುರುತಿಸಲಾಗಿರುತ್ತದೆ.

17) ನಾನು ಎಸ್.ಎಸ್.ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಣ್ಣನಾದ 1 ನೇ ಪ್ರತಿವಾದಿ 1 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುವದಿಲ್ಲ ಅಂದರೆ ಸರಿಯಲ್ಲ, ಆದರೆ ಆತನು 4 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಣ್ಣನಾದ 1 ನೇ ಪ್ರತಿವಾದಿ ಮಕ್ಬೂದಯೂಸೂಫ 4 ನೇ ತರಗತಿಯವರೆಗೆ ವಿಧ್ಯಾಭ್ಯಾಸ

ಮಾಡಿದ್ದರಿಂದ ಆತನು ಕನ್ನಡದಲ್ಲಿ ಎಂ.ಜೆ.ಪಟವೇಗಾರ ಅಂತಾ ಸಹಿ ಮಾಡುತ್ತಿದ್ದ ಅಂದರೆ ಸರಿ. ನಾನು ಎ.ಜೆ.ಪಟವೇಗಾರ ಅಂತಾ ಇಂಗ್ಲೀಷನಲ್ಲಿ ಸಹಿ ಮಾಡುತ್ತೇನೆ ಅಂದರೆ ಸರಿ. ನಮ್ಮ ಕುಟುಂಬಕ್ಕೆ ಸೇರಿದ ಜಮೀನುಗಳ ಕುರಿತಾಗಿ ದಿನಾಂಕಃ 14.07.2006 ನೇ ಇಸ್ವಿಯಂದು ನನ್ನ ನಡುವೆ ಮತ್ತು 1 ನೇ ಪ್ರತಿವಾದಿಯಾದಂತಹ ಮಕ್ಬೂದ ಯೂಸೂಫ ಇಬ್ಬರ ನಡುವೆ ಒಂದು ಪಾಲು ವಾಟ್ನಿ ಪತ್ರ ಮಾಡಿಕೊಂಡಿರುತ್ತೇವೆ ಅಂದರೆ ಸರಿ. ಸದರಿ ಪಾಲುವಾಟ್ನಿ ಪತ್ರವು ನೊಂದಣಿಯಾಗಿರುತ್ತದೆ ಅಂದರೆ ಸರಿ.

18) ಸದರಿ ಪಾಲುವಾಟ್ನಿ ಪತ್ರ ಮಾಡುವಾಗ ನನ್ನ ಮಗನಾದ ಖಲೀಲಅಕ್ಮದ ಮತ್ತು ಅಳಿಯನಾದ ಭಾಷಾಸಾಬ ಚಳ್ಳಾಳ ಇವರೂ ಸಹ ಹಾಜರಿದ್ದರು ಅಂದರೆ ಸರಿ. ದಿನಾಂಕಃ 14.07.2006 ನೇ ಇಸ್ವಿಯಂದು ಆದಂತಹ ಪಾಲುವಾಟ್ನಿ ಪತ್ರದ ಪ್ರಕಾರ ನನಗೆ ಬರತಕ್ಕಂತಹ ಆಸ್ತಿಗಳ ಕುರಿತಾಗಿ ನಾನು ರೂ.3,00,000/- ಹಣವನ್ನು ಪಡೆದುಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಇಲ್ಲಿಯವರೆಗೆ ಒಂದು ರೂಪಾಯಿಯನ್ನು ಸಹ ಪಡೆದುಕೊಂಡಿಲ್ಲ ಎಂದು

ನುಡಿಯುತ್ತಾರೆ. ದಿನಾಂಕಃ 14.07.2006 ನೇ ಇಸ್ವಿಯಂದು ಆದಂತಹ ನೊಂದಾಯಿತ ಪಾಲು ವಾಟ್ನಿ ಪ್ರಕಾರ ನಾನು ನನಗೆ ಬರತಕ್ಕಂತಹ ರೂ.3,00,000/- ಗಳನ್ನು ಪಡೆದುಕೊಂಡು ಸದರಿ ಪಾಲು ವಾಟ್ನಿ ಪತ್ರಕ್ಕೆ ಹುಬ್ಬಳ್ಳಿಯ ಸಬರಿಜಿಸ್ಟಾರ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಾಖಲಾತಿಯನ್ನು ಈಗಾಗಲೇ ನಿ.ಡಿ-3 ಎಂದು ಗುರುತಿಸಲಾಗಿರುತ್ತದೆ. ಆ ನಂತರ 1 ನೇ ಪ್ರತಿವಾದಿ ಮಹ್ಮದ ಯೂಸೂಫ ಈತನು ಆತನ ಪಾಲಿಗೆ ಬಂದ ಆಸ್ತಿಗಳನ್ನು 2 ನೇ ಪ್ರತಿವಾದಿ ಅಲ್ತಾಫಹುಸೇನ ಹಳವೂರ ಇವರಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಸರಿ.

19) 1 ನೇ ಪ್ರತಿವಾದಿ ಮಹ್ಮದಯೂಸೂಫ ಈತನು ಆತನ ಪಾಲಿಗೆ ಬಂದ 5 ಜಮೀನುಗಳನ್ನು 2 ನೇ ಪ್ರತಿವಾದಿ ಅಲ್ತಾಫಹುಸೇನ ಈತನಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಆ ವಿಷಯದ ಬಗ್ಗೆ ನನಗೆ ಖಚಿತವಾದ ಮಾಹಿತಿ ಇರುವದಿಲ್ಲ. ನಾನು ಪ್ರತಿವಾದಿಗಳಿಂದ ಆಸ್ತಿಯನ್ನು ಎತ್ತಿ ಹಾಕಲು ಪ್ರತಿವಾದಿಗಳ ವಿರುದ್ದ ದಾವೆ ದಾಖಲುಪಡಿಸಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎಸ್.ವಿ.ಪಿ ವಕೀಲರುಃ 2 ನೇ ಪ್ರತಿವಾದಿಯರ ಪರವಾಗಿಃ**

20) ದಿನಾಂಕಃ 28.07.2008 ನೇ ಇಸ್ವಿಯಂದು 1 ನೇ ಪ್ರತಿವಾದಿ ಮಹ್ಮದಯೂಸೂಪ ಆತನ ಪಾಲಿನ ಬಂದ ಜಮೀನುಗಳನ್ನು 2 ನೇ ಪ್ರತಿವಾದಿ ಅಲ್ತಾಪಹುಸೇನ ಈತನಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಸಂಬಂಧಿಕರಾಗಬೇಕು ಎಂದು ನುಡಿಯುತ್ತಾರೆ. ದಿನಾಂಕಃ 28.07.2008 ನೇ ಇಸ್ವಿಯಂದು 1 ನೇ ಪ್ರತಿವಾದಿ ಮಹ್ಮದ ಯೂಸೂಪ ಆತನ ಪಾಲಿಗೆ ಬಂದ ಜಮೀನುಗಳನ್ನು

2 ನೇ ಪ್ರತಿವಾದಿಗೆ ಮಾರಾಟ ಮಾಡಿ ಆತನ ಎಲ್ಲ ಆಸ್ತಿಗಳ ಕಬ್ಜೆಗಳನ್ನು 2 ನೇ ಪ್ರತಿವಾದಿಗೆ ಬಿಟುಟಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು 1 ನೇ ಪ್ರತಿವಾದಿ ಮಹ್ಮದಯೂಸೂಫ 2 ನೇ ಪ್ರತಿವಾದಿ ಅಲ್ತಾಪಹುಸೇನ ಈತನಿಗೆ ಮಾರಾಟ ಮಾಡಿದ ನಂತರ ಆತನ ಹೆಸರಿಗೆ ಸದರಿ ದಾಖಲಾತಿಗಳನ್ನು ನೊಂದಣಿ ಮಾಡಲಾಗಿದೆ ಅಂದರೆ ಸಾಕ್ಷಿಯು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಸಂಬಂಧಿಕರಾಗಬೇಕು ಎಂದು ನುಡಿಯುತ್ತಾರೆ. ಈಗಲೂ ಸಹ ದಾವಾ ಆಸ್ತಿಗಳ ಕುರಿತಾಗಿ 2 ನೇ ಪ್ರತಿವಾದಿಯ ಹೆಸರು ಸಂಬಂದಪಟ್ಟ ಪಹಣಿ ಪತಿರಕೆಗಳಲ್ಲಿ ನಮೂದು ಇರುತ್ತದೆ ಸಾಕ್ಷಿಯು 2 ನೇ ಪ್ರತಿವಾದಿಯು ಆತನ ಹೆಸರಿಗೆ ನಮಗೆ ಗೊತ್ತಿಲ್ಲದೇ ಹಾಗೆ ನೊಂದಣಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ 2 ನೇ ಪ್ರತಿವಾದಿ ಅಲ್ತಾಪಹುಸೇನ ಈತನ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿತ್ತು ಅಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಗಳ ಕುರಿತಾಗಿ ಪಹಣಿ ಪತಿರಕೆಗಳಲ್ಲಿ ನೊಂದಣಿ ಇದ್ದಾಗಲೂ ಸಹ ಉದ್ದೇಶಪೂರ್ವಕವಾಗಿ ನಾನು ಪಹಣಿ ಪತ್ರಿಕೆಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

21) ನಾನು ದಾವಾ ಆಸ್ತಿಗಳಲ್ಲಿ ಮಹ್ಮದಯೂಸೂಪ 1 ನೇ ಪ್ರತಿವಾದಿಗೆ ನನ್ನ ಹಿಸ್ಸೇಯನ್ನು ಕೇಳಿದಾಗ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅಲ್ತಾಪಹುಸೇನ ಈತನೂ ನನಗೆ ದೂರದಿಂದ ಸಂಬಂಧಿಕರಾಗಬೇಕು. 2008 ನೇ ಇಸ್ವಿಯಲ್ಲಿ 2 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಖರೀದಿ ಹಿಡಿದಾಗ ನಾನು ಆ ವಿಷಯವನ್ನು 2 ನೇ ಪ್ರತಿವಾದಿಗೆ ವಿಚಾರ ಮಾಡಿರುವದಿಲ್ಲ, ಏಕೆಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ನಾನು

2 ನೇ ಪ್ರತಿವಾದಿ ಅಲ್ತಾಪಹುಸೇನ ಈತನಿಗೆ ಮೋಸ ಮಾಡಲು ಈ ಸುಳುಳ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.

ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು

ಹಾವೇರಿ.